

ಕಡಲಿನ ನಡುವಿನ ಹೆಬ್ಬಂಡೆಯಲ್ಲಿರುವ 'ತನಹ್ ಲಾಟ್' ಬಾಲಿಯ ಆಕರ್ಷಣೆಗಳಲ್ಲೊಂದು. ಭಕ್ತಿಯ ಜೊತೆಗೆ ಅಲೆಗಳ ಅಬ್ಬರದ ಮೋಜು ಇಲ್ಲಿದೆ.

ಪುರಾತನ ದೇವಸ್ಥಾನಗಳು, ಎಲ್ಲೆಂದರಲ್ಲಿ ತಾವರೆಕೊಳಗಳು, ಕಾಡುಮೇಡುಗಳಲ್ಲಿ ಧುಮ್ಮಿಕ್ಕುವ ಜಲಧಾರೆಗಳು ಇಲ್ಲಿವೆ. ಬಾಲಿಯ ವಿಮಾನ ನಿಲ್ದಾಣದಲ್ಲಿಳಿದು ತಲುಪಬೇಕಾದ ಸ್ಥಳ ತಲುಪುವಷ್ಟರಲ್ಲಿ, ಒಂದೈವತ್ತು ದೇವಸ್ಥಾನಗಳಾದರೂ ಎದುರಾಗಿರುತ್ತವೆ.

'ನಿಜಕ್ಕೂ ಬಾಲಿಯಲ್ಲಿ ಸಾವಿರ ದೇಗುಲಗಳಿವೆಯೇ?' ನಮ್ಮ ಮುಗ್ಧ ಪ್ರಶ್ನೆಗಂತೂ ಅರಿ ಕುಲು ಕುಲು ನಕ್ಕ. 'ಬರೀ ಸಾವಿರವಾ? ಪ್ರವಾಸಿಗರು ನೋಡುವ ದೇವಸ್ಥಾನಗಳೇ ಬೇರೆ. ಇಲ್ಲಿ ಪ್ರತಿ ಕುಟುಂಬಕ್ಕೂ ಒಂದೊಂದು ದೇವಸ್ಥಾನವಿದೆ. ಕುಟುಂಬದವರ ಸಮುಚ್ಛಯದಲ್ಲಿರುವ ದೇಗುಲಗಳಿಗೆ ಹೊರಗಿನವರ ಪ್ರವೇಶ ನಿಷಿದ್ಧ. ಹಬ್ಬ, ಹರಿದಿನ, ಆಚರಣೆಗಳೆಲ್ಲಾ ಇಲ್ಲೇ ನಡೆಯುತ್ತೆ. ವರ್ಷದಲ್ಲೊಮ್ಮೆ ಬೆಳೆದ ಬೆಳೆ, ಹಣ್ಣು ಹಂಪಲುಗಳನ್ನು ಅರ್ಪಿಸುವುದು ಮನೆಗಳು ನಡೆದುಕೊಂಡು ಬರುವ ದೇವಸ್ಥಾನಗಳಲ್ಲಿ. ಹಾಗಾಗಿ ವರ್ಷವಿಡೀ ಯಾವುದಾದರೂ ದೇವಸ್ಥಾನಗಳಲ್ಲಿ 'ಓಡಾಲನ್' ಇರುತ್ತೆ' ಎಂದು ವಿವರಣೆ ಕೊಟ್ಟ. ಎಲ್ಲೋ ನಮ್ಮ ಆಚರಣೆ ತರವೇ ಕೇಳಿಸಿತೇ?

ಬಾಲಿಯಲ್ಲಿ ನೋಡಿದ ಮೊದಲ ದೇವಸ್ಥಾನ ಪುರ ಲುಹರ್ ಲೆಂಪ್ಯುಯಾಂಗ್. ಪೂರ್ವ ದಿಕ್ಕಿನಲ್ಲಿರುವ ಲೆಂಪ್ಯುಯಾಂಗ್ ಬೆಟ್ಟದಲ್ಲಿರುವ ಈ 'ಸಾವಿರ ಮೆಟ್ಟಿಲುಗಳ ದೇವಸ್ಥಾನ' ತಲುಪಬೇಕಾದರೆ 1700 ಮೆಟ್ಟಿಲುಗಳನ್ನು ಹತ್ತಬೇಕು. ಪ್ರಯಾಸದ ಮೆಟ್ಟಿಲುಗಳನ್ನು ಹತ್ತುವಾಗ ಗೊಣಗಿದರೆ ಅದರ ತುದಿ ತಲುಪಲು ಸಾಧ್ಯವಾಗುವುದಿಲ್ಲವೆಂಬ ನಂಬಿಕೆಯೂ ಬಾಲಿನೀಸರಲ್ಲಿದೆ. ಅತ್ಯಂತ ಪರಮ ಶ್ರೇಷ್ಠ, ಸರ್ವೋಚ್ಚ ದೇಗುಲವೆಂದು ಪರಿಗಣಿಸಿರುವ ಈ ದೇಗುಲದ ಉಗಮ ಸ್ಥಾನ ತಲುಪಬೇಕಾದರೆ ಪ್ರಶಾಂತವಾದ ಪವಿತ್ರ ಮನಸ್ಥಿತಿಯಲ್ಲಿ ಹೋಗಬೇಕೆನ್ನುವುದು ಪ್ರತೀತಿ.

ಬಾಲಿಯ ಆರು ಪುರಾತನ ಆಧಾರಸ್ಥಂಭ ದೇಗುಲಗಳಲ್ಲಿ ಪುರ ಲುಹರ್ ಲೆಂಪ್ಯುಯಾಂಗ್ ಒಂದೆಂದು ಪರಿಗಣಿಸಲಾಗಿದೆ. ಮತ್ತುಳಿದ ಐದು ದೇಗುಲಗಳು — ಪುರ ಬೈಸಾಕೈ, ಪುರ ಗುವಾ ಲಾವೈ, ಪುರ ಬಟುಕರು, ಪುರ ಪುಸೆರಿಂಗ್ ಜಗತ್ ಮತ್ತು ಪುರ ಉಲುವಾಟು. 'ಪ್ರಪಂಚದ ಆರು ಪವಿತ್ರ ಅಭಯಧಾಮ' ಎಂದು ಗುರುತಿಸಿಕೊಂಡಿರುವ ಇವು ಬಾಲಿಯ ಆರು ಪವಿತ್ರ ಪೂಜಾ ಮಂದಿರಗಳೂ ಹೌದು.

ಲೆಂಪ್ಯುಯಾಂಗ್ ಬೆಟ್ಟದ ಆಧಾರಭೂತ ಸ್ಥಾನದಲ್ಲಿರುವ ದೇಗುಲ, ಕಾಲದಿಂದ ಕಾಲಕ್ಕೆ ಧಾರ್ಮಿಕ ಸಮತೋಲನ ಕಾಪಾಡಿಕೊಂಡು ಬರುತ್ತಿರುವ ದೈವಿಕ ಶಕ್ತಿಯಿರುವಂತಹದ್ದು. ಪೂರ್ವ ದಿಕ್ಕು ಶ್ವೇತ ಬಣ್ಣವನ್ನು ಪ್ರತಿನಿಧಿಸುವುದರೊಂದಿಗೆ ಪರಮಶಿವನ ವಾಸಸ್ಥಾನವೂ ಹೌದಾದ್ದರಿಂದ ಪರಮಶಿವನ ಶಕ್ತಿ ಸಂಚಾರವಿಲ್ಲಿದೆಯೆಂಬ ನಂಬಿಕೆ.

ಬುಡದಲ್ಲಿ ನಿಂತು ಕಣ್ಣೆತ್ತಿ ನೋಡಿದರೆ, ದೇವಸ್ಥಾನ ಬೆಟ್ಟದ ತುತ್ತ ತುದಿಯಲ್ಲೆಲ್ಲೋ ಮರೆಯಾದಂತೆ ಗೋಚರಿಸುತ್ತಿತ್ತು. ಬಾಲಿಯಲ್ಲಿ ಎಲ್ಲಾ ಕಡೆ 'ಸರೋಂಗ್' ಧರಿಸಿಯೇ ಹೋಗಬೇಕು. ಪ್ರವೇಶ ಟಿಕೇಟಿನ ಶುಲ್ಕದೊಂದಿಗೆ ಸರೋಂಗ್ ದರವೂ ಸೇರಿರುತ್ತೆ. ಕೆಳಗಿಳಿದ ನಂತರ ಸರೋಂಗನ್ನು ವಾಪಾಸು ಕೊಡಬೇಕು. ಸರೋಂಗ್ ತೊಟ್ಟು ಮೆಟ್ಟಿಲೇರುವುದಕ್ಕೂ ಮಳೆ ಜೋರಾಗುವುದಕ್ಕೂ ಸಾಟಿಯಾಯಿತು. ಮೆಟ್ಟಿಲುಗಳಾದರೂ ಒಂದೊಂದೂ ಮಾರೆತ್ತರ. ಹತ್ತುವುದೇ ಪ್ರಯಾಸ. ಕೈಯಲ್ಲಿ ಛತ್ರಿ ಹಿಡಿದುಕೊಂಡು ಒದ್ದೆ ಮೆಟ್ಟಿಲುಗಳನ್ನು ಹುಷಾರಾಗಿ ಹತ್ತಿ ತುದಿ ತಲುಪಿದರೆ, ಸ್ವರ್ಗದ ಮಹಾದ್ವಾರ ಅಗಾಧವಾಗಿ ತೆರೆದು ನಿಂತಿತ್ತು. ಹತ್ತಿದ ಆಯಾಸವೆಲ್ಲಾ ಒಂದೇ ಸಲಕ್ಕೆ ಪರಿಹಾರ. ಖುಷಿಯಿಂದ ಮೇಲೆ ಹೋದರೆ ಗರ್ಭಗುಡಿ ಮುಚ್ಚಿದೆ! ಸ್ವರ್ಗದ ಹೆಬ್ಬಾಗಿಲು ದಾಟಿ ಒಳಗಡಿಯಿಟ್ಟರೆ ಮತ್ತಷ್ಟು ಮೆಟ್ಟಿಲುಗಳಿರುವ ದೇವಸ್ಥಾನದ ಪ್ರಧಾನ ಬಾಗಿಲು. ಆದರೆ ಎಲ್ಲೆಲ್ಲೂ 'ಇಲ್ಲಿ ಹತ್ತುವುದನ್ನು ನಿಷೇಧಿಸಲಾಗಿದೆ!' ಬೋರ್ಡ್. ಸ್ಥಳೀಯರನ್ನು ಬಾಗಿಲು ಯಾವಾಗ ತೆರೆಯುತ್ತದೆಂದು ಕೇಳಿದರೆ, ಹೊರಗಿನವರಿಗೆ ತೆರೆಯುವುದಿಲ್ಲವೆಂಬ ಉತ್ತರ.

ಸ್ಥಳೀಯನೊಬ್ಬ ಪ್ರತಿಯೊಬ್ಬರ ಮೊಬೈಲ್ ಇಸಿದುಕೊಂಡು ಸ್ವರ್ಗದ ಮಹಾದ್ವಾರದಲ್ಲಿ ನಿಲ್ಲಿಸಿ ಫೋಟೊ ಹೊಡೆದುಕೊಡುತ್ತಿದ್ದ. ಅದಕ್ಕೆ ಇಪ್ಪತ್ತು ಸಾವಿರ ಶುಲ್ಕ (ನೂರು ರೂಪಾಯಿ). ನಾವೇ ಫೋಟೊ ತೆಗೆದುಕೊಳ್ಳುತ್ತೇವೆಂದರೆ, ಮಹಾದ್ವಾರದ ಹತ್ತಿರ ನಿಲ್ಲಲು ಅವಕಾಶವನ್ನೇ ಕೊಡಲಿಲ್ಲ!

### ತಮನ್ ತೀರ್ಥಗಂಗಾ

ಅಗುಂಗ್ ಅಗ್ನಿ ಪರ್ವತದ ಸನಿಹವಿರುವ ತಮನ್ ತೀರ್ಥಗಂಗಾವನ್ನು 1948ರಲ್ಲಿ, ಕರಂಗಸೆಮ್ ರಾಜ ಅನಕ್ ಅಗುಂಗ್ ಅಗುಂಗ್ ಅಂಗ್ಲೂರಾ ಕೆಟುಟ್ ಕಟ್ಟಿಸಿದೆನ್ನಲಾಗಿದೆ. ಮೊದಲು ಅರಮನೆಯಾಗಿದ್ದ ತೀರ್ಥಗಂಗಾದ ಹೆಸರು, ಹಿಂದೂಗಳ ಪವಿತ್ರ ನದಿ ಗಂಗಾದಿಂದಾಗಿ ಬಂದಿರುವುದರಿಂದ ಕೊಳದ ನೀರು ಪವಿತ್ರವೆಂಬ ನಂಬಿಕೆ. ಈಗಲೂ ಧಾರ್ಮಿಕ ಪೂಜೆ ಪುನಸ್ಕಾರಗಳಿಗೆ ಕೊಳದ ನೀರನ್ನು ಉಪಯೋಗಿಸಲಾಗುವುದಂತೆ. ಈ 'ವಾಟರ್ ಪ್ಯಾಲೇಸ್' ಅನ್ನು ಸ್ನಾನದ ಕೊಳಗಳಾಗಿ ರಾಜ ಮನೆತನದವರು ಉಪಯೋಗಿಸುತ್ತಿದ್ದರೆನ್ನುವುದು ಚಾರಿತ್ರಿಕ ಹಿನ್ನೆಲೆ.

ತೀರ್ಥಗಂಗಾ ವಾಟರ್ ಪ್ಯಾಲೇಸ್ ಅತ್ಯಂತ ರಮಣೀಯ ಸ್ಥಳ. ಒಂದು ಹೆಕ್ಟೇರ್ ಜಾಗದಲ್ಲಿ ಅರಳಿರುವ ಹಸಿರು ಉದ್ಯಾನವನದಲ್ಲಿ ಕಣ್ಣು ಹಾಯಿಸಿದೆಲ್ಲೆಲ್ಲ ಚಂದದ ತಾವರೆ ಕೊಳಗಳು,